ಮೇಲೆ ಕಾರಂತರು ಮೈಕಿನ ಮುಂದೆ ನಿಂತು, ತಮ್ಮ ಕನ್ನಡಕದ ಒಳಗಿನ ಕಣ್ಣುಗಳು ಬೆರಗನ್ನು ಸೂಚಿಸುತ್ತಿವೆಯೋ ಅಥವಾ ವ್ಯಂಗ್ಯವನ್ನು ಚೆಲ್ಲುತ್ತಿವೆಯೋ ಅನ್ನುವ ಹಾಗೆ ನೋಡುತ್ತಾ ಮಾತನಾಡಿದರು. ತಮ್ಮ ಟ್ರೇಡ್ ಮಾರ್ಕ್ ಬಾಡಿ ಲ್ಯಾಂಗ್ವೇಜ್ ಆಗಿದ್ದ ಗಡ್ಡ ಕೆರೆದುಕೊಳ್ಳುತ್ತಾ ಹೇಳಿದರು.

"ನಿಮ್ಮ ಆಲೋಚನೆ ಚೆನ್ನಾಗಿದೆ. ಆದರೆ, ಈಗಿನ ಪರಿಸ್ಥಿತಿಯಲ್ಲಿ ಮನೆಮನೆಗೂ ಬರುವುದು ಎಂದರೆ ಒಂದೋ ಕರೆಂಟು, ಅಥವಾ ನಲ್ಲಿ ಅಥವಾ ಚರಂಡಿ ಕನೆಕ್ಷನ್ನು. ನಾಟಕ ಈ ಯಾವ ಕ್ಯಾಟಗರಿಗೂ ಬರುವುದಿಲ್ಲವಾದ್ದರಿಂದ ಸದ್ಯಕ್ಕೆ ನಾಟಕ ಮನೆಮನೆಯಲ್ಲಿ ಆಡಲು ಬರುವುದಿಲ್ಲ'' ಎಂದುಬಿಟ್ಟರು. ಆಗ ಮತ್ತೆ ಜೋರು ಚಪ್ಪಾಳೆ ಬಿತ್ತು ಅಂತ ಪ್ರತ್ಯೇಕವಾಗಿ ಹೇಳಬೇಕಿಲ್ಲ.

ನಾಟಕ ಪ್ರೀತಿಸುವ ಎಲ್ಲರೂ ನಾಟಕವನ್ನು ಅಂತರಂಗ–ಬಹಿರಂಗ ಎರಡರಲ್ಲೂ ಕಾಣುತ್ತಾರೆ. ಅನುಭವಿಸುತ್ತಾರೆ. ಬರೀ ಚಪ್ಪಾಳೆ ಬೇಡುವ ಜನ ಮಾತ್ರ ಬೇರೆಯದೇ ನಾಟಕ ಮಾಡುತ್ತಾ ತಿರುಗುತ್ತಾರೆ. ಇತಿಹಾಸ ಅಂಥವರನ್ನು ಮುಲಾಜಿಲ್ಲದೆ ನೂಕೆಯುತ್ತದೆ. ರಂಗಭೂಮಿಯನ್ನು ಪ್ರೀತಿಸುವವರು ಯಾವುದೇ ಫೀಲ್ಡಿನಲ್ಲಿದ್ದರೂ ಸರಿಯೇ, ಹೊಸದೊಂದು ಕಾಣ್ಕೆಯನ್ನು ಕಂಡೇ ತೀರುತ್ತಾರೆ.

ವಾಟ್ ಯು ಸೀ ಈಸ್ ವಾಟ್ ಯು ಗೆಟ್. ನಿಮಗೆ ಎಷ್ಟು ಕಾಣುತ್ತದೋ ಅಷ್ಟೂ ಅರ್ಥವಾಗುತ್ತದೆ. ಎಷ್ಟು ಅರ್ಥವಾಗುತ್ತದೋ ಅಷ್ಟು ಹೆಚ್ಚು ಕಾಣುತ್ತಾ ಹೋಗುತ್ತದೆ. ಅದಕ್ಕಾಗಿ 'ನೀವು' ನೋಡಬೇಕು. ಅಂದರೆ ಮಾತ್ರ 'ಅರ್ಥವಾಗುತ್ತದೆ'.

ಒಮ್ಮೆ ನಾಟಕದ ರುಚಿ ಹತ್ತಿದರೆ ನಿಮಗೆ ಮತ್ತೆ ಬೇರೆ ಎಲ್ಲಾ ಕಲೆಗಳನ್ನೂ ಆಸ್ವಾದಿಸುವ ರುಚಿ ಹುಟ್ಟುತ್ತದೆ. ಜೊತೆಗೆ ಸಹಬಾಳ್ವೆಯ ಧ್ಯೇಯ, ಓದುವ ಆಸಕ್ತಿ, ಬೇರೆಯ ಸಂಸ್ಕೃತಿಗಳ ಒಡನಾಟ, ಒಳನೋಟಗಳು ಸಿಗುತ್ತವೆ.

''ಮೇರೆ ಪಾಸ್ ಬಂಗ್ಲಾ ಹೈ ಗಾಡಿ ಹೈ ಬ್ಯಾಂಕ್ ಬ್ಯಾಲೆನ್ಸ್ ಹೈ... ತುಮ್ಹಾರೆ ಪಾಸ್ ಕ್ಯಾ ಹೈ?'' ಅನ್ನುವ ದೀವಾರ್ ಸಿನಿಮಾದಲ್ಲಿ ಅಮಿತಾಬ್ ಬಚ್ಚನ್ ಹೇಳುವ ಈ ಕಾಲಾತೀತ ಡೈಲಾಗಿಗೆ ಶಶಿ ಕಪೂರ್ ನಿರ್ಭಾವುಕವಾಗಿ ಉತ್ತರಿಸುತ್ತಾರೆ, ''ಮೇರೆ ಪಾಸ್ ಮಾ ಹೈ'' ಅಂತ.

ನಾಟಕವನ್ನು ಹೀರಿ ಸೂರೆದು ಉಣ್ಣುವ ಹುಚ್ಚು ಹತ್ತಿದ ಮೇಲೆ ನೀವೂ ಹೇಳಬಹುದು... ''ತೇರೆ ಪಾಸ್ ಬಂಗ್ಲಾ, ಗಾಡಿ ಸಬ್ ಹೋಗಾ... ಲೇಕಿನ್ ಮೇರೆ ಪಾಸ್ ಡ್ರಾ–ಮಾ ಹೈ''

ಸಾವಿಲ್ಲದಾ, ಕೇಡಿಲ್ಲದ... ರೂಹಿಲ್ಲದಾ ಚೆಲುವಂಗೆ 'ಅಕ್ಕ' ಒಲಿದ ಹಾಗೆ ಅವೆಲ್ಲವೂ ಆಗಿರುವ ನಾಟಕಕ್ಕೆ ನೀವು ಒಲಿಯುವಂತಾಗಲಿ!


**ಪ್ರೀತಿ ನಾಗರಾಜ**

ಲೇಖಕಿ ವೃತ್ತಿಯಿಂದ ಪತ್ರಕರ್ತೆ. ದಾವಣಗೆರೆಯವರು, ಪ್ರಸ್ತುತ ಮೈಸೂರಿನ ನಿವಾಸಿ. ಪತ್ರಿಕೋದ್ಯಮ, ಮನಃಶಾಸ್ತ್ರಗಳಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದು, 'ಡೆಕ್ಕನ್ ಹೆರಾಲ್ಡ್', 'ಇಂಡಿಯನ್ ಎಕ್ಸ್‌ಪ್ರೆಸ್' ಪತ್ರಿಕೆಗಳಲ್ಲಿ, 'ಸಿಎನ್‌ಬಿಸಿ' ಟೀವಿ ಚಾನೆಲ್‌ನಲ್ಲಿ ಕೆಲಸ ಮಾಡಿರುವ ಅನುಭವಿ. ರಂಗಭೂಮಿ ಮತ್ತು ಸಿನಿಮಾರಂಗದ ಪ್ರಸಿದ್ಧ ಅಭಿನೇತ್ರಿ ಬಿ. ಜಯಶ್ರೀ ಅವರ ಆತ್ಮಕತೆ 'ಕಣ್ಣಾ ಮುಚ್ಚೇ... ಕಾಡೇ ಗೂಡೇ...'ಯ ನಿರೂಪಕಿ. 'ಪ್ರಜಾವಾಣಿ' ಪತ್ರಿಕೆಯ 'ಕಾಮನಬಿಲ್ಲು' ಪುರವಣಿಯಲ್ಲಿ ಪ್ರಕಟಗೊಂಡ 'ಮಿರ್ಚಿ ಮಂಡಕ್ಕಿ' ಅಂಕಣ, ಅದೇ ಹೆಸರಿನಲ್ಲಿ ಪುಸ್ತಕರೂಪದಲ್ಲಿ ಪ್ರಕಟಗೊಂಡಿದೆ.